೩. ದೇವನಹಳ್ಳಿ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಹಿಂದುಳಿದ ವರ್ಗಗಳಿಗೆ ಮಂಜೂರಾಗಿದ್ದ ಹಣವನ್ನು ಲ್ಯಾಪ್ಸ್ ಮಾಡಿರುವುದು

ಶ್ರೀ ಟಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಸರ್ಕಾರ ಜೂನಿಯರ್ ಕಾಲೇಜ ದೇವನಹಳ್ಳಿ ಇಲ್ಲಿ ಹಿಂದುಳಿದ ವರ್ಗಗಳಿಗೆ ಮಂಜೂರಾಗಿದ್ದ ೧,೬೦,೦೦ ರೂ.ಗಳನ್ನು ಶ್ರೀ ಹಫೀಜಾ ಖಾಷಾ ಎಂಬುವ ಪ್ರಾಂಶುಪಾಲರು (ಈಗ ಪ್ರಾಂಶುಪಾಲರು ಸರ್ಕಾರಿ ಜೂನಿಯರ್ ಕಾಲೇಜ್ ಹಾನ್‌ಬಾಳ್ ಸಕಲೇಶಪುರ ತಾಲ್ಲೂಕು ಹಾಸನ ಜಿಲ್ಲೆ) ಇವರು ಸರ್ಕಾರಕ್ಕೆ ವಾಪಾಸ್ ಕಟ್ಟಿದ್ದಾರೆ; ಇದಕ್ಕೆ ಕಾರಣವೇನು ? ಈ ರೀತಿ ಬಡಜನತೆಗೆ ಮಂಜೂರಾಗಿದ್ದ ಹಣ ವಾಪಸ್ಸು ಮಾಡುವ ಉದ್ದೇಶವೇನು ? ಸರ್ಕಾರ ಇವರ ವಿರುದ್ಧ ಕ್ರಮ ಕೈಗೊಳ್ಳಬಾರದೇಕೆ? ಸಮಾಜ ಕಲ್ಯಾಣ ಮಂತ್ರಿಗಳು ಉತ್ತರಿಸುವರೇ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕೊಟ್ಟ ಹಣ ವಾಪಸ್ ಮಾಡಿದ್ದರೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

೪. ಸುಳ್ಯ ತಾಲ್ಲೂಕು ಮುನ್ಸಿಫ್ ಕೋರ್ಟಿನಲ್ಲಿ ವಿಚಾರಣಾಧಿಕಾರಿಯವರನ್ನು ನೇಮಿಸದಿರುವುದರಿಂದ ಉಂಟಾಗಿರುವ ತೊಂದರೆಯ ಬಗ್ಗೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಮುನ್ಸಿಫ್ ಕೋರ್ಟಿನ ವಿಚಾರಣಾಧಿಕಾರಿಯ ಹುದ್ದೆಯು ಸುಮಾರು ಒಂದು ವರ್ಷದಿಂದ ಖಾಲಿ ಬಿದ್ದಿರುವ ಪ್ರಯುಕ್ತ ವಿಚಾರಣೆ ಗೊಳಪಡಿಸಿದ ಅನೇಕ ಪ್ರಕರಣಗಳು ಇತ್ಯರ್ಥವಾಗದೇ ಹಾಗೇ ಉಳಿದಿದ್ದು, ಕೇಸು ಹಾಕಿದ ವ್ಯಕ್ತಿಗಳಿಗೆ ಎದುರಾಳಿಗಳು ಹಿಂಸೆ. ಕಿರುಕುಳ ಹಾಗೂ ಪ್ರಾಣಭಯವನ್ನುಂಟು ಮಾಡುತ್ತಿದ್ದಾರೆ

ಅಂತಹ ಒಂದು ನಿರ್ದಿಷ್ಟ ಪ್ರಕರಣವನ್ನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಸುಳ್ಯ ತಾಲ್ಲೂಕಿನ ಅಲೆಟ್ಟಿ ಗ್ರಾಮದ, ಮೈಂದರೂರು ಕಾನಮನೆ ನಿವಾಸಿಯಾದ ಶ್ರೀ ಎಂ. ಬುದ್ಧನಾಯಕ್ಕ ಅವರ ಪತ್ನಿ ಗೌರಮ್ಮ ಅವರನ್ನು ಶ್ರೀ ಎಂ. ಸುಂದರನಾಯ್ಕ ಅಬ್ಬಾರಿ ನೀರಿಕ್ಷಕ ವೃತ್ತ ಇತರರು ಕೈವಾಡ ಆಕೆಯ ಎಡಕಾಲು, ಸೊಂಟವನ್ನು ಬಲವಾದ ದೊಣ್ಣೆಯಿಂದ ಹೊಡೆದು ಮರುದಿದ್ದಾರೆ. ಈ ಬಗ್ಗೆ ಸದರಿ ಮುನ್ಸಿಫ್ ಕೋರ್ಟಿನಲ್ಲಿ ದಾವೆ ದಾಖಲು ಮಾಡಿದ್ದು, ವಿಚಾರಣಾಧಿಕಾರಿ ಇಲ್ಲದ ಪ್ರಯುಕ್ತ ಒಂದು ವರ್ಷವಾದರೂ ಈ ಪ್ರಕರಣ ಇತ್ಯರ್ಥವಾಗದೆ ಮೂಲೆಗೆ ಬಿದ್ದಿದೆ. ಈ ಒಂದು ಅವಕಾಶವನ್ನು ಎದುರಾಳಿಗಳು ದುರುಪಯೋಗ ಪಡಿಸಿಕೊಂಡು ನೀವು ಇಷ್ಟೆಲ್ಲಾ ಮಾಡಿ ಏನು ಸಾಧಿಸಿದಂತಾಗಿದೆ, 'ನಮ್ಮನ್ನು ಏನು ಮಾಡಬಲ್ಲಿರಿ' ? ಎಂದು ಹೇಳುತ್ತಾ ಪುನಃ ದಬ್ಬಾಳಿಕೆ ಪ್ರಾಣ ಭಯವನ್ನುಂಟು ಮಾಡುತ್ತಿದ್ದಾರೆ. ಈ ಬಗ್ಗೆ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದರೂ ಅವರಿಗೆ ರಕ್ಷಣೆ ಸಿಗುತ್ತಿಲ್ಲ. ಈ ಬಗ್ಗೆ ಶ್ರೀ ಬುದ್ಧನಾಯ್ಕ ಅವರು ಮುಖ್ಯ ಮಂತ್ರಿಯವರಿಗೆ ೫-೩-೧೯೮೭ ರಂದು ಪತ್ರ ಬರೆದು ತಿಳಿಸಿದರೂ ಇನ್ನೂ ಯಾವುದೇ ರಕ್ಷಣೆಯನ್ನು ಅವರಿಗೆ ನೀಡಿಲ್ಲ. ಆದಕಾರಣ ಅವರಿಗೆ ಪೋಲೀಸ್ ರಕ್ಷಣೆ ನೀಡಬೇಕೆಂದೂ ಹಾಗೂ ಸುಳ್ಯ ಮುನ್ಸಿಫ್ ಕೋರ್ಟಿಗೆ ಕೂಡಲೇ ವಿಚಾರಣಾಧಿಕಾರಿಯವರೊಬ್ಬರನ್ನು ನೇಮಿಸಿ ಈ ಪ್ರಕರಣವನ್ನು ಇತ್ಯರ್ಥ ಮಾಡಬೇಕೆಂದೂ ಅಧ್ಯಕ್ಷರ ಮುಖಾಂತರ ಸರ್ಕಾರದವರನ್ನು ನಾನು ಕೋರುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಅವರಿಗೆ ಪೋಲೀಸ್ ರಕ್ಷಣೆ ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ. ಇನ್ನು ಎರಡನೆಯದಾಗಿ ಸುಳ್ಯ ತಾಲ್ಲೂಕು ಮುನ್ಸಿಫ್ ಮ್ಯಾಜಿಸ್ಟ್ರೇಟ್‌ನ ಖಾಲಿಯಾದ ಹುದ್ದೆಗೆ ಅಧಿಕಾರಿಗಳನ್ನು ಹಾಕಿಲ್ಲ ಎಂದು ಹೇಳಿದ್ದಾರೆ. ಇದು ಸರ್ಕಾರದ ಕೈಯಲ್ಲಿ ಇಲ್ಲದೇ ಇರತಕ್ಕಂಥಾ ಕೆಲಸ. ಈಗ ಇದರ ಬಗ್ಗೆ ರೆಕ್ಕೊಟ್‌ಮೆಂಟ್ ಆಗಿದೆ. ಈ ರಜಾ ಅವಧಿ ಮುಗಿದ ಮೇಲೆ ಆದಷ್ಟು ಬೇಗ ಅಲ್ಲಿಗೆ ಆ ಅಧಿಕಾರಿಯನ್ನು ಪೋಸ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.